ಕರ್ನಾಟಕ ಸರ್ಕಾರ

<u>ಕಾಲೇಜು ಶಿಕ್ಷಣ ಇಲಾಖೆ</u>

ಸಂಖ್ಯೆ: ಕಾಶಿಇ:65:ಯುಜಿಸಿ:ಆಯವ್ಯಯ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:28-08-2017.

## ಸುತ್ತೋಲೆ

**ವಿಷಯ:** EMISನಲ್ಲಿ ಎಲ್ಲಾ ಖಾಸಗಿ ಅನುದಾನಿತ ಪದವಿ ಕಾಲೇಜುಗಳು ಯುಜಿಸಿ ಹಿಂಬಾಕಿ ಪಾವತಿಯ ವಿವರಗಳನ್ನು ಸಂಪೂರ್ಣವಾಗಿ ಅಳವಡಿಸದೇ ಇರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ EMIS ನಲ್ಲಿ ಯುಜಿಸಿ ಹಿಂಬಾಕಿ ಪಾವತಿಯ ವಿವರಗಳನ್ನು ಸಂಪೂರ್ಣವಾಗಿ ಅಳವಡಿಸುವಂತೆ ಹಾಗೂ ಅಳವಡಿಕೆಯಾಗಿರುವ ವಿವರಗಳು ಸರಿಯಾಗಿರುವ ಬಗ್ಗೆ ಪರಿಶೀಲಿಸುವಂತೆ ಮತ್ತು ನ್ಯೂನ್ಯತೆ ಇರುವಂತಹ ವಿವರಗಳನ್ನು ಪರಿಶೀಲಿಸಿ ಕ್ರಮವಹಿಸುವಂತೆ ಹಲವಾರು ಬಾರಿ ಸೂಚನೆ ನೀಡಲಾಗಿರುತ್ತದೆ. ಆದರೂ ಸಹ ಹಲವಾರು ಕಾಲೇಜುಗಳು ಸಂಪೂರ್ಣ ಮಾಹಿತಿಯನ್ನು EMIS ನಲ್ಲಿ ಅಳವಡಿಸಿರುವುದಿಲ್ಲ.

ಆದಕಾರಣ ದಿನಾಂಕ:31/08/2017ರೊಳಗೆ EMIS ನಲ್ಲಿ ಸಂಪೂರ್ಣ ಮಾಹಿತಿಯನ್ನು ಅಳವಡಿಸಲು ಸೂಚನೆ ನೀಡಲಾಗಿದೆ. ಸದರಿ 03 ದಿನಗಳೊಳಗೆ ಸಂಪೂರ್ಣ ಮಾಹಿತಿಯನ್ನು ಅಳವಡಿಸದಂತಹ ಕಾಲೇಜುಗಳಿಗೆ ಇನ್ನೂ ಪಾವತಿಸಬೇಕಾಗಿರುವ ಯುಜಿಸಿ ಹಿಂಬಾಕಿಗಾಗಿ ಯಾವುದೇ ಅನುದಾನವನ್ನು ಬಿಡುಗಡೆಗೊಳಿಸುವುದಿಲ್ಲ ಎಂಬುದನ್ನು ಈ ಮೂಲಕ ಗಮನಕ್ಕೆ ತರಲಾಗಿದೆ.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಕಾಲೇಜು ಶಿಕ್ಷಣ ನಿರ್ದೇಶಕರು.

<u>ಇವರಿಗೆ:</u>

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಬೆಂಗಳೂರು, ಮಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಕಲಬುರಗಿ – ತಮ್ಮ ತಮ್ಮ ಕಛೇರಿ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ ಸುತ್ತೋಲೆಯನ್ನು ಗಮನಕ್ಕೆ ತಂದು, ತತ್‌ಕ್ಷಣವೇ ಮಾಹಿತಿ ಅಳವಡಿಕೆಗೆ ಕ್ರಮಕೈಗೊಳ್ಳುವುದು ಹಾಗೂ ದಿನಾಂಕ:04/09/2017ರಂದು ನಡೆಯಲಿರುವ ಸಭೆಗೆ ಎಲ್ಲಾ ಕಾಲೇಜುಗಳ ಕಾಲೇಜುವಾರು ಕ್ರೋಢೀಕೃತ ವರದಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು <u>EMIS ನಲ್ಲಿ ನಮೂದಿಸಿರುವ ಪಾವತಿ ವಿವರ ಹಾಗೂ ಇನ್ನೂ ಪಾವತಿಸಬೇಕಾದ ವಿವರಗಳು ಸರಿಯಾಗಿರುತ್ತದೆ ಎಂದು ದೃಢೀಕರಿಸಿ</u> ಈ ಕಛೇರಿಗೆ ಸಲ್ಲಿಸುವುದು.
2. ಎಲ್ಲಾ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇವರಿಗೆ ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
4. ಕಛೇರಿ ಪ್ರತಿ.

6S, UGC Circular.Docx-1.Docx